# ಬಿಜೆಪಿ-ಕರ್ನಾಟಕ

# ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆ

04 ಜುಲೈ 2024, ಗುರುವಾರ । ಬೆ. 10.00 । ಅರಮನೆ ಮೈದಾನ, ಬೆಂಗಳೂರು

## ನಿರ್ಣಯ – 1

### ಪ್ರಧಾನಿ ಶ್ರೀ ನರೇಂದ್ರ ಮೋದಿಯವರ "ಹ್ಯಾಟ್ರಿಕ್ ಗೆಲುವು" ರಾಜ್ಯ ಬಿಜೆಪಿ ಅಭಿನಂದನೆ

1. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ನಿರಂತರವಾಗಿ 3ನೇ ಬಾರಿಗೆ ಕಾಂಗ್ರೆಸ್ಸೇತರ ಪ್ರಧಾನಮಂತ್ರಿಯಾಗಿ ಆಯ್ಕೆಯಾದ ಸನ್ಮಾನ್ಯ ಶ್ರೀ ನರೇಂದ್ರಮೋದಿ ಅವರಿಗೆ ಬಿಜೆಪಿ ಕರ್ನಾಟಕ ಕಾರ್ಯಕಾರಿಣಿ ಸಭೆ ಅಭಿನಂದನೆ ಸಲ್ಲಿಸುತ್ತದೆ. ಎನ್.ಡಿ.ಎ. ನೇತೃತ್ವದ ಸರ್ಕಾರವನ್ನು ಭಾರತೀಯರು ಸತತವಾಗಿ ಮೂರನೇ ಬಾರಿ ಬಹುಮತದಿಂದ ಆರಿಸಿದ್ದಾರೆ. 2024ನೇ ವರ್ಷವನ್ನು ಜಗತ್ತಿನ ಚುನಾವಣಾ ಪರ್ವವೆಂದೇ ಕರೆಯಬಹುದು. ಏಕೆಂದರೆ ಈ ವರ್ಷದಲ್ಲಿ 64 ದೇಶಗಳಲ್ಲಿ ಚುನಾವಣೆ ನಡೆಯಲಿದೆ. ಪ್ರಪಂಚದ 49% ಜನರು ಮತ ಚಲಾಯಿಸಿ ನೂತನ ಸರಕಾರಗಳನ್ನು ಆಯ್ಕೆ ಮಾಡಲಿದ್ದಾರೆ. ಸುಮಾರು 98 ಕೋಟಿ ಮತದಾರರಿರುವ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದ ಚುನಾವಣೆ ಜಗತ್ತಿನ ಗಮನ ಸೆಳೆದಿತ್ತು.

2. ಕಳೆದ ಹತ್ತು ವರ್ಷಗಳಿಂದ ಬಹುಮತದ ಬಿ.ಜೆ.ಪಿ. ಸರ್ಕಾರ ದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿದೆ. ಬಹುಮತದ ಸಶಕ್ತ, ಸದೃಢ ಮತ್ತು ಏಕಪಕ್ಷೀಯ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಜಗತ್ತಿನ ವಿಚಿದ್ರಕಾರಿ ಶಕ್ತಿಗಳಿಗೆ ಜಾಗವೇ ಇಲ್ಲದಂತಾಗುತ್ತದೆ ಎಂದು ಅರಿತ ದೇಶ ವಿರೋಧಿ ಶಕ್ತಿಗಳು, ಭಾರತ ವಿರೋಧಿ ವಿಚಾರ ಧಾರೆಗಳು, ಮೂಲಭೂತವಾದಿಗಳು, ಮಾದಕವಸ್ತು ಜಾಲಗಳು, ದೇಶವಿರೋಧಿ NGOಗಳು, ಶಸ್ತ್ರಾಸ್ತ್ರ ಮಾರಾಟಗಾರರು, ದೇಶವಿಭಜಕ ಶಕ್ತಿಗಳು, ಅಂತರ್‌ರಾಷ್ಟ್ರೀಯ ವಿಧ್ವಂಸಕ ಶಕ್ತಿಗಳು ಒಂದಾಗಿ ಭಾರತದ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡಿದ್ದವು. ಹಾಗಾಗಿ ವಿದೇಶಾಂಗ ಸಚಿವರಾದ ಶ್ರೀ ಜೈಶಂಕರ್ ಅವರು **'THE WHOLE WORLD IS FIGHTING ELECTIONS IN INDIA'** ಇಡೀ ಜಗತ್ತು ಭಾರತದ ಚುನಾವಣೆಯಲ್ಲಿ ಹೋರಾಡುತ್ತಿದೆ ಎಂದಿದ್ದರು.

**3.** ಕಾಂಗ್ರೆಸ್ ಪಕ್ಷ ಭಾರತದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂಬ ಹಸಿ ಸುಳ್ಳನ್ನು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಬಗ್ಗೆ ಹೇಳುತ್ತಾ ಬಂದಿದ್ದರು. 140 ಕೋಟಿ ಜನಸಂಖ್ಯೆಯ ಭಾರತದ ಚುನಾವಣೆಯೆಂದರೆ ಜಗತ್ತಿನ ಅತಿದೊಡ್ಡ **'ಪ್ರಜಾಪ್ರಭುತ್ವದ ಹಬ್ಬ' ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿಗರ ಸುಳ್ಳನ್ನು ಬಯಲು ಮಾಡಲು, ಭಾರತೀಯ ಜನತಾ ಪಕ್ಷವು 25 ದೇಶಗಳ ರಾಜಕೀಯ ಪಕ್ಷಗಳ ಗಣ್ಯರನ್ನು ಭಾರತದ ಚುನಾವಣೆ ವೀಕ್ಷಿಸಲು ಆಹ್ವಾನಿಸಲಾಗಿತ್ತು.** ವಿದೇಶಿ ರಾಜಕೀಯ ಪಕ್ಷಗಳ ಗಣ್ಯರ ವೀಕ್ಷಣೆಯಲ್ಲಿ 2024ರ ಲೋಕಸಭಾ ಚುನಾವಣೆಯನ್ನು ನಡೆಸುವ ಮೂಲಕ ಭಾರತದ ಪ್ರಜಾಪ್ರಭುತ್ವದ ವಿಸ್ತಾರ ಮತ್ತು ಪಾರದರ್ಶಕತೆಯನ್ನು ವಿಶ್ವಕ್ಕೆ ತೋರ್ಪಡಿಸಲಾಯಿತು. **ಪಾರದರ್ಶಕ ಚುನಾವಣೆ, EVMಗಳ ನಿಷ್ಪಕ್ಷಪಾತ ನಿರ್ವಹಣೆ, ಚುನಾವಣಾ ಆಯೋಗದ ಶಿಸ್ತು, ಪೊಲೀಸ್ ಬಂದೋಬಸ್ತ್, ಸಾರ್ವಜನಿಕರ ಸುರಕ್ಷೆ ಮತ್ತು ಜನರ ಸಹಭಾಗಿತ್ವ 2024ರ ಚುನಾವಣೆಯ ಪ್ರಮುಖ ಅಂಶಗಳಾಗಿದ್ದವು.**

4. **ಶ್ರೀ ನರೇಂದ್ರ ಮೋದಿಯವರ ಈ ದೀರ್ಘ ಆಡಳಿತದಲ್ಲಿ ಒಂದೇ ಒಂದು ಭ್ರಷ್ಟಾಚಾರ ಪ್ರಕರಣ ನಡೆದಿಲ್ಲ.** ಅವರ ವಿರುದ್ಧ ಮಾಡಿದ ಎಲ್ಲಾ ಆರೋಪಗಳು ನ್ಯಾಯಾಲಯದಲ್ಲಿ ಆಧಾರವಿಲ್ಲದೆ ಹುರುಳಿ ಹೋಗಿವೆ. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಕಾಲದಲ್ಲಿ ಕೇಂದ್ರದಿಂದ ಒಂದು ರೂಪಾಯಿ ಅನುದಾನ ಬಿಡುಗಡೆಯಾದರೆ ಫಲಾನುಭವಿಗಳಿಗೆ ತಲುಪುವುದು ಕೇವಲ 15 ಪೈಸೆ ಮಾತ್ರವಾಗಿತ್ತು. ಆದರೆ ಪ್ರಧಾನಿ **ಮೋದಿಯವರ 'DBT' ಯೋಜನೆಯಿಂದ ಕೇಂದ್ರದ ಯೋಜನೆಗಳ ಸಂಪೂರ್ಣ ಹಣ ನೂರಕ್ಕೆ ನೂರರಷ್ಟು ಫಲಾನುಭವಿಗಳಿಗೆ ಭ್ರಷ್ಟಾಚಾರ ರಹಿತವಾಗಿ ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ ನರೇಂದ್ರ ಮೋದಿಯವರ ಭ್ರಷ್ಟಾಚಾರ ರಹಿತ ಮತ್ತು ಅಭಿವೃದ್ಧಿಪರ ಆಡಳಿತವನ್ನು ಮೆಚ್ಚಿ ಜನರು ಮೂರನೇ ಬಾರಿಗೆ ಅವರನ್ನು ಆಯ್ಕೆ ಮಾಡಿದ್ದಾರೆ. ಇದನ್ನು ಕಾಂಗ್ರೆಸ್ ಪಕ್ಷಕ್ಕೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.**

**5.** 2014ರಲ್ಲಿ ಭಾರತ 5 ದುರ್ಬಲ ಆರ್ಥಿಕತೆಗಳಲ್ಲಿ ಒಂದಾಗಿತ್ತು (Fragile-5 ಎಂದು ಮೋರ್ಗನ್ ಸ್ಟ್ಯಾನ್ಲಿ ವರ್ಗೀಕರಿಸಿತ್ತು.) ಮೋದಿಯವರು 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಅವರು ಕೈಗೊಂಡ ಸಬಲ ಆರ್ಥಿಕ ನೀತಿಗಳಿಂದಾಗಿ ಈಗ ಭಾರತವು **ಜಗತ್ತಿನಲ್ಲಿ ಐದನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.**

6. ಮೋದಿಯವರು ಅಧಿಕಾರ ವಹಿಸಿಕೊಂಡ 10 ವರ್ಷದ ಆಡಳಿತಾವಧಿಯಲ್ಲಿ ಬಹು ಆಯಾಮದ ಬಡತನವು ತೀವ್ರವಾಗಿ ಕಡಿಮೆಯಾಗಿದೆ. ನೀತಿ ಆಯೋಗದ ವರದಿಯ ಪ್ರಕಾರ ಸುಮಾರು 25 ಕೋಟಿ ಕಡುಬಡವರನ್ನು ಬಡತನದ ರೇಖೆಯಿಂದ ಮೇಲೆತ್ತಲಾಗಿದೆ ಎಂಬ ಸಂಗತಿ ಅದರ ಅಂಕಿ ಅಂಶಗಳಿಂದ ದೃಡಪಟ್ಟಿದೆ. ಇಡೀ ವಿಶ್ವಕ್ಕೆ ಕರೋನ ಆವರಿಸಿದ ಸಮಯದಲ್ಲಿ ಜಗತ್ತಿನ ಇತರ ದೇಶಗಳಲ್ಲಿ ಬಡತನದ ಪ್ರಮಾಣ ಹೆಚ್ಚಾದರೆ ಭಾರತದಲ್ಲಿ ಮಾತ್ರ ಕಡಿಮೆಯಾಗಿದೆ. ಪ್ರಧಾನಮಂತ್ರಿಗಳ ಅನ್ನಭಾಗ್ಯ ಯೋಜನೆಯಡಿಯಲ್ಲಿ ಸುಮಾರು 80 ಕೋಟಿ ಕುಟುಂಬಗಳಿಗೆ ಉಚಿತ ಪಡಿತರ (ಅಕ್ಕಿ) ನೀಡಲಾಗುತ್ತಿದೆ. ಸುಮಾರು 4 ಕೋಟಿಗೂ ಅಧಿಕ ಮನೆಗಳನ್ನು ಬಡವರಿಗೆ ಕಟ್ಟಿಸಿ ಕೊಡಲಾಗಿದೆ, 14 ಕೋಟಿ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

7. ಶಿಕ್ಷಣ ಕ್ಷೇತ್ರ ಹಾಗೂ ವೈದ್ಯಕೀಯ ಕ್ಷೇತ್ರದ ಪ್ರಗತಿ ಅಭೂತಪೂರ್ವವಾಗಿದೆ. ಇದರ ಒಂದು ಪಕ್ಷಿನೋಟ ಇಲ್ಲಿದೆ. **ಐಐಟಿ 16 ರಿಂದ 23, ಐಐಎಂ 13 ರಿಂದ 20, ಐಐಐಟಿ 09 ರಿಂದ 25, ಎಐಐಎಂಎಸ್ 07 ರಿಂದ 22, ವೈದ್ಯಕೀಯ ಕಾಲೇಜುಗಳು 387 ರಿಂದ 706, ವಿಶ್ವವಿದ್ಯಾನಿಲಯಗಳು 723 ರಿಂದ 1113, ವೈದ್ಯಕೀಯ ಸೀಟುಗಳು, 55,880 ರಿಂದ 1,08,915, ಸ್ನಾತಕೋತ್ತರ ವೈದ್ಯಕೀಯ ಸೀಟುಗಳು 31,185 ರಿಂದ 70,645ಕ್ಕೆ** ಏರಿಕೆಯಾಗಿರುವುದೇ ತೀವ್ರ ಪ್ರಗತಿಗೆ ಸಾಕ್ಷಿಯಾಗಿದೆ.

8. **ಕಳೆದ 10 ವರ್ಷಗಳಲ್ಲಿ ಪಿ.ಎಂ. ಗತಿಶಕ್ತಿ : ಪ್ರಗತಿಗೆ ಹೊಸ ವೇಗ ನೀಡಿದೆ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ 91,287 ಕಿ.ಮೀ. ಗಳಿಂದ 1,45,240 ಕಿ.ಮೀ. ಹೆಚ್ಚಳ, ಗ್ರಾಮ ಸಡಕ್ ಯೋಜನೆ 3,86,197 ಕಿ.ಮೀ. ಗಳಿಂದ 7,35,085 ಕಿ.ಮೀ.ಗೆ ಹೆಚ್ಚಳ, 17 ವಂದೇ ಭಾರತ್ ರೈಲುಗಳ ಸಂಚಾರ, ಮೆಟ್ರೋ ಜಾಲ 5 ನಗರಗಳಿಂದ 20 ನಗರಗಳಿಗೆ ಏರಿಕೆ, ಮೆಟ್ರೋ ರೈಲ್ವೆ ಹಳಿಗಳ ನಿರ್ಮಾಣ 248 ಕಿ.ಮೀ. ನಿಂದ 868 ಕಿ.ಮೀ. ಗೆ ಏರಿಕೆ., ವಿಮಾನ ನಿಲ್ದಾಣ 74 ರಿಂದ 149 ಕ್ಕೆ ಏರಿಕೆ, ಅಟಲ್ ಟನಲ್, ಅಟಲ್ ಸೇತು, ಬೋಗಿ ಬೀಲ್ ಸೇತುವೆಗಳ ನಿರ್ಮಾಣ** ಹೀಗೆ ದೇಶಕ್ಕೆ ಅಭಿವೃದ್ಧಿಯ ಹೊಸ ಶಕೆಯನ್ನು ಆರಂಭಿಸುವ ಮೂಲಕ ಪ್ರಪಂಚದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶವನ್ನಾಗಿ ನರೇಂದ್ರ ಮೋದಿಯವರು ಪ್ರಪಂಚಕ್ಕೆ ತೋರಿಸಿ ಕೊಟ್ಟಿದ್ದಾರೆ.

9. **ಮೋದಿಯವರ 10 ವರ್ಷದ ಆಡಳಿತಾವಧಿಯಲ್ಲಿ ಭಯೋತ್ಪಾದಕ ಚಟುವಟಿಕೆಗಳು ಗಣನೀಯವಾಗಿ ಕಡಿಮೆಯಾಗಿವೆ. ಭಾರತದ ತಂಟೆಗೆ ಬಂದರೆ ಪಾಕಿಸ್ತಾನದ ಗಡಿಯನ್ನೂ ಮೀರಿ ಭಯೋತ್ಪಾದಕರನ್ನು ಸದೆಬಡೆಯುತ್ತೇವೆಂಬ ಸಂದೇಶವನ್ನು ಬಾಲಾಕೋಟ್ ವೈಮಾನಿಕ ದಾಳಿ ಮತ್ತು ಸರ್ಜಿಕಲ್ ಸ್ಟ್ರೈಕ್ ಮೂಲಕ ಎಚ್ಚರಿಸಲಾಗಿದೆ.** ಮೋದಿಯವರ ಆಡಳಿತದಲ್ಲಿ ಆಂತರಿಕ ಭದ್ರತೆಗೆ ಪರಮ ಆದ್ಯತೆ, ದೇಶದಾದ್ಯಂತ ಬಾಂಬ್ ಸ್ಫೋಟ ಮಾಡುತ್ತಿದ್ದ ಭಯೋತ್ಪಾದಕರು ಮತ್ತು ಅದಕ್ಕೆ ಬೆಂಬಲ ನೀಡುತ್ತಿದ್ದ ಸಂಘಟನೆಗಳು ಹಾಗೂ ಅಂತಾರಾಷ್ಟ್ರೀಯ ಶಕ್ತಿಗಳ ವಿರುದ್ಧ ದಿಟ್ಟ, ಸಮರ್ಥ ಹಾಗೂ ಧೃಡ ಕಾರ್ಯಚಾರಣೆ ನಡೆಸಲಾಗಿದೆ.

10. ಇದೇ ಸಂದರ್ಭದಲ್ಲಿ ಜಗತ್ತಿನ ಎರಡು ಕಡೆ ಯುದ್ಧ ನಡೆಯುತ್ತಿದೆ, ಯುರೋಪ್ ಮತ್ತು ಮಧ್ಯ ಪ್ರಾಚ್ಯದಲ್ಲಿನ ಯುದ್ಧ ಜಗತ್ತಿನಾದ್ಯಂತ ಪರಿಣಾಮ ಬೀರಿದೆ. ಬಲಿಷ್ಠ ರಾಷ್ಟ್ರಗಳೂ ಪರೋಕ್ಷವಾಗಿ ಯುದ್ಧದಲ್ಲಿ ಭಾಗಿಗಳಾಗಿವೆ. ಅಂತರ್‌ರಾಷ್ಟ್ರೀಯ 'SUPPLY CHAIN' ಕುಸಿದು ಬಿದ್ದಿದೆ. **ಭಾರತವು ಯುದ್ಧದಲ್ಲಿ ಭಾಗಿಯಾದ ಯಾವುದೇ ದೇಶದ ಪರವಾಗಿ ನಿಲ್ಲದೇ ತನ್ನ ತಟಸ್ಥ ನಿಲುವಿನೊಂದಿಗೆ ಎಲ್ಲಾ ದೇಶಗಳೊಡನೆ ಮಾತುಕತೆ ನಡೆಸಲು ಸಫಲವಾಗಿದೆ.** ವಿಶ್ವಕ್ಕೆ ಮತ್ತೊಂದು ಅಣುಬಾಂಬಿನ ಯುದ್ಧ ಭೀತಿಯನ್ನು ತಪ್ಪಿಸಿದೆ. ಭಾರತದ 140 ಕೋಟಿ ಜನರ ಸುಗಮ ಬದುಕಿಗೆ ಅಗತ್ಯವಿರುವ ಪೆಟ್ರೋಲಿಯಂ ಉತ್ಪನ್ನಗಳನ್ನು ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಾಗು ದ್ವಿಪಕ್ಷೀಯ ಒಪ್ಪಂದಗಳೊಂದಿಗೆ ಮಿತ್ರರಾಷ್ಟ್ರಗಳಿಂದ ಪಡೆದು ಜನರಿಗೆ ಯುದ್ಧದ ಪರಿಣಾಮ ಬೀರದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

11. ಭಾರತದ ಸಾರ್ವತ್ರಿಕ ಚುನಾವಣೆ 2024ನ್ನು ಇಂಡಿ ಒಕ್ಕೂಟವು ಸುಳ್ಳಿನ ಕಂತೆಗಳಿಂದ ರಾಷ್ಟ್ರವಿರೋಧಿ ವಿಚಿದ್ರಕಾರಿ ಶಕ್ತಿಗಳ ಜೊತೆಗೂಡಿ, ಭಾರತ್ ಜೋಡೋ ಯಾತ್ರೆ ಹೆಸರಿನಲ್ಲಿ ದೇಶದ ಏಕತೆ, ಅಖಂಡತೆ ಹಾಗೂ ಸಮಗ್ರತೆಗೆ ಧಕ್ಕೆಯನ್ನುಂಟು ಮಾಡಿದೆ. ಜನರ ಮನಸಿನಲ್ಲಿ ವಿಷಬೀಜ ಬಿತ್ತಿ, ಹಿಂದೂಗಳ ಮಧ್ಯೆ ಜಾತಿ-ಜಾತಿಗಳ ಹೆಸರಿನಲ್ಲಿ ಸಮಾಜವನ್ನು ಒಡೆದು ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆಯನ್ನುಂಟು ಮಾಡಿ ಡಾ॥ ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಚಾರವೆಸಗುವ ಕಾರ್ಯ ಮಾಡಲಾಗಿದೆ.

12. **ಶ್ರೀ ನರೇಂದ್ರ ಮೋದಿಯವರು 3ನೇ ಬಾರಿ ಅಧಿಕಾರಕ್ಕೆ ಬಂದ ಮೊದಲ ದಿನವೇ 20,000 ಕೋಟಿಯನ್ನು ಕಿಸಾನ್ ಸಮ್ಮಾನ್ ಯೋಜನೆಯಡಿಯಲ್ಲಿ ರೈತರ ಖಾತೆಗೆ ಜಮೆ ಮಾಡಿದ್ದಾರೆ.** ರೈತರ 14 ಬೆಳೆಗಳಿಗೆ 2024-25 ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಲಾಗಿದೆ. ಕನಿಷ್ಠ ಬೆಂಬಲ ಬೆಲೆ ಹೆಚ್ಚಳದಿಂದ ರೈತರಿಗೆ ಈ ಸಾಲಿನಲ್ಲಿ ಸುಮಾರು 35,000 ಕೋಟಿ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರ ವ್ಯಯಿಸಲಿದೆ. 70 ವರ್ಷಕ್ಕೂ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ಸೇವೆ ಒದಗಿಸಲಾಗಿದೆ.

ಶ್ರೀ ನರೇಂದ್ರ ಮೋದಿಯವರು ನಿರಂತರ ದೇಶ ಸೇವೆಯಲ್ಲಿ ತೊಡಗುತ್ತಾ **"ತನಗೆ ಅಲ್ಪ-ಸಮಾಜಕ್ಕೆ ಸರ್ವಸ್ವ"** ಎಂಬ ಧ್ಯೇಯ ವಾಕ್ಯದೊಡನೆ ಎಲ್ಲರನ್ನೂ ಪ್ರೇರೇಪಿಸುತ್ತಾ, **ಜಗತ್ತಿನ ಬಹುತೇಕ ದೇಶಗಳೊಡನೆ ಉತ್ತಮ ಭಾಂದವ್ಯ ಹೊಂದುವ ಮೂಲಕ ನಮ್ಮೆಲ್ಲರನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯುತ್ತಿದ್ದಾರೆ.**

**ಆದ್ದರಿಂದಲೇ ದೇಶದ ಜನ ನಮ್ಮ ನೆಚ್ಚಿನ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಎನ್.ಡಿ.ಎ. ಸರ್ಕಾರಕ್ಕೆ 3ನೇ ಬಾರಿಗೆ ಅಧಿಕಾರವನ್ನು ತಂದುಕೊಡುವಲ್ಲಿ ಆಶೀರ್ವಾದ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇಡೀ ದೇಶದ ಜನರ ವಿಶ್ವಾಸವನ್ನು ಗಳಿಸುವಲ್ಲಿ ಸಫಲರಾಗಿ ಸರ್ಕಾರ ಸ್ಥಾಪಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಗೆ ಬಿಜೆಪಿ ಕರ್ನಾಟಕ ಕಾರ್ಯಕಾರಿಣಿ ಸಭೆ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.**

***********